# ಈಜುಕೊಳದಲ್ಲಿ ಹೂವಿನುಡುಗೆ ಸುಂದರಿ



■ ವಿಶಾಖ ಎನ್.

ಜಾಹ್ನವಿ ಕಪೂರ್ ಹೆಸರನ್ನು ಗೂಗಲ್ ಮಾಡಿದರೆ, ಮೇಲಿನ ಸಾಲಿನಲ್ಲಿ ಕಾಣುವುದು ಅವರ ಇನ್‌ಸ್ಟಾಗ್ರಾಂ ಲಿಂಕ್. ಯಾಕೆಂದರೆ, ಅಲ್ಲಿ ಅವರಿಗೆ ಒಂದೂವರೆ ಕೋಟಿಗೂ ಹೆಚ್ಚು ಜನ ಫಾಲೋವರ್ಸ್ ಇದ್ದಾರೆ. ಇನ್‌ಸ್ಟಾಗ್ರಾಂ ಅನ್ನು ನೋಡುವ ಯುವಜನತೆಯ ಸಂಖ್ಯೆ ದೊಡ್ಡದಿರುವುದರಿಂದ ಅಲ್ಲಿ ಸದಾ ತಮ್ಮನ್ನು ತಾವು ಚಾಲ್ತಿಯಲ್ಲಿರುವಂತೆ ನೋಡಿಕೊಳ್ಳಬೇಕು ಎಂದು ಆಪ್ತರು ಜಾಹ್ನವಿ ಅವರಿಗೆ ಸಲಹೆ ನೀಡಿದ್ದು ಒಳ್ಳೆಯ ಫಲವನ್ನೇ ನೀಡಿದೆ.

2018ರಿಂದ ಕಳೆದ ವರ್ಷದವರೆಗೆ ಕೇವಲ ಐದು ಸಿನಿಮಾಗಳಲ್ಲಿ ಜಾಹ್ನವಿ ನಟಿಸಿದರು. ಈ ವರ್ಷ ಮೂರು ಸಿನಿಮಾಗಳು ತೆರೆಕಾಣಲಿರುವುದು ಅವರು ತಮ್ಮ ವೃತ್ತಿಬದುಕನ್ನೂ ಉತ್ತಮವಾಗಿ ರೂಪಿಸಿಕೊಳ್ಳುತ್ತಿರುವುದಕ್ಕೆ ಸಾಕ್ಷಿ. 'ಕೊಲಮಾವು ಕೋಕಿಲಾ' ಎಂಬ 2018ರ ತಮಿಳು ಚಿತ್ರದ ಕಥಾಸಾರಾಂಶವನ್ನು ಎತ್ತಿಕೊಂಡು ತಯಾರಾಗಿರುವ 'ಗುಡ್ ಲಕ್ ಜೆರ್ರಿ' ವರು ಚಿತ್ರೀಕರಣ ಮುಗಿಸಿರುವ ಒಂದು ಚಿತ್ರ. ಆನಂದ್ ಎಲ್. ರೈ ಅದನ್ನು ನಿರ್ಮಿಸಿದ್ದಾರೆ. ಅದಲ್ಲದೆ ಜಾಹ್ನವಿ ಅವರ ತಂದೆ ಬೋನಿ ಕಪೂರ್ ನಿರ್ಮಾಣದ 'ಮಿಲ್ಲಿ' ಚಿತ್ರತಂಡವು ಇತ್ತೀಚೆಗಷ್ಟೇ ಚಿತ್ರೀಕರಣ ಪೂರೈಸಿ ಪೋಸ್ಟ್ ಪ್ರೊಡಕ್ಷನ್ ಕೆಲಸದಲ್ಲಿ ನಿರತವಾಗಿದೆ.

ಆ ಸಿನಿಮಾ ಚಿತ್ರೀಕರಣ ಮುಗಿದದ್ದೇ ಜಾಹ್ನವಿ ಬಿಡುವನ್ನು ಹೊಸ ರೀತಿಯ ಸಂಭ್ರಮವನ್ನಾಗಿ ಬದಲಿಸಿದರು. ಅವರು ಈಜುಕೊಳಕ್ಕೆ ಇಳಿಯಲು ನಿರ್ಧರಿಸಿದರು. ಸ್ವಿಮ್ ಸೂಟ್ ಬದಲು ಹೂವಿನ ವಿನ್ಯಾಸದ ಬಿಕಿನಿ ತೊಡಲು ವಿನ್ಯಾಸಕರೇ ಸಲಹೆ ನೀಡಿದರು. ಒಂದೊಳ್ಳೆಯ ಲೆನ್ಸಿನ ಕ್ಯಾಮೆರಾ ಹಿಡಿದವರು ಅತಿ ಕ್ಲೋಸ್–ಅಪ್ (ಎಕ್ಸ್‌ಟ್ರೀಮ್ಲಿ ಕ್ಲೋಸ್) ಎಂದು ತಾಂತ್ರಿಕ ಪರಿಭಾಷೆಯಲ್ಲಿ ಹೇಳುತ್ತಾರೆ) ಫೋಟೊಗಳನ್ನು ತೆಗೆದರು. ಅವನ್ನು ಜಾಹ್ನವಿ ಇನ್‌ಸ್ಟಾಗ್ರಾಂನಲ್ಲಿ ಪೋಸ್ಟ್ ಮಾಡಿದರು. 'ಅರ್ಕಾಡಿಯಾ–ಫೈಡಿಂಗ್ ಮೈ ವೇ ಬ್ಯಾಕ್ ಟು ಯಾ' ಎಂಬ ತರುಣ–ತರುಣಿಯರಿಗೆ ಅರ್ಥವಾಗುವ ಶೀರ್ಷಿಕೆಯನ್ನು ಆ ಫೋಟೊಗಳಿಗೆ ಅವರು ನೀಡಿದ್ದಾರೆ. ಮನೀಷ್ ಮಲ್ಹೋತ್ರ ತರಹದ ವಿನ್ಯಾಸಕರು ಆ ಫೋಟೊಗಳನ್ನು ಮೆಚ್ಚಿ ಕಮೆಂಟ್ ಬರೆದಿದ್ದಾರೆ. ■

# ನನಸಾಯಿತು ಸಿದ್ಧಾಂತ್ ಸೂಪರ್‌ಬೈಕ್ ಕನಸು

'ಹಾರ್ಲೆ ಡೇವಿಡ್‌ಸನ್ ಸ್ಪೋರ್ಟ್‌ಸ್ಟರ್ ಆರ್' ಮಾದರಿಯ ಬೈಕಿನ ಮೇಲೆ ಸಿದ್ಧಾಂತ್ ಚತುರ್ವೇದಿ ಕಳೆದ ವಾರ ಪೋಸ್ ಕೊಟ್ಟಿದ್ದೇ ಕೊಟ್ಟಿದ್ದು. 'ಗಲ್ಲಿ ಬಾಯ್' ಚಿತ್ರದಲ್ಲಿ ರ್‍ಯಾಪರ್ ಪಾತ್ರದಲ್ಲಿ ಪಡ್ಡೆಗಳ ಮನಸೂರೆಗೊಂಡಿದ್ದ ಹದವರಿತ ನಟ ಸಿದ್ಧಾಂತ್. ಮೊದಲಿನಿಂದಲೂ ಅವರಿಗೆ ಬೈಕ್‌ಗಳ ಶೋಕಿ. ದೊಡ್ಡ ಗ್ಯಾರೇಜಿನಲ್ಲಿ ಅವರಿಷ್ಟದ ಹಲವು ಬೈಕ್‌ಗಳು ಇವೆ. ಅದಕ್ಕೆ ಹೊಸ ಸೇರ್ಪಡೆ ಹಾರ್ಲೆ.

'ಗಲ್ಲಿ ಬಾಯ್' ನಂತರ ಅವರಿಗೆ ಹೆಚ್ಚು ಚಿತ್ರಗಳಲ್ಲಿ ನಟಿಸುವ ಅವಕಾಶಗಳೇನೂ ಸಿಕ್ಕಿರಲಿಲ್ಲ. 'ಬಂಟಿ ಔರ್ ಬಬ್ಲಿ 2'ನಲ್ಲಿ ಅಭಿನಯಿಸಿದರು. ಶಕುನ್ ಬತ್ರಾ ನಿರ್ದೇಶನದ 'ಗೆಹ್‌ರಾಯಿಯಾ'ದಲ್ಲಿ ದೀಪಿಕಾ ಪಡುಕೋಣೆ ಜತೆಗೆ ಅವರು ನಟಿಸಿದ್ದು, ಅದು ತೆರೆಕಾಣಲು ಸಿದ್ಧವಿದೆ. ಫೆಬ್ರುವರಿಯಲ್ಲಿ ತೆರೆಕಾಣಬೇಕಿದ್ದ ಚಿತ್ರವು ಕೋವಿಡ್ ಕಾರಣದಿಂದಾಗಿ ತಡವಾಗಿ ಬಿಡುಗಡೆಯಾಗುವ ಸಾಧ್ಯತೆ ಇದೆ. ಅನನ್ಯಾ ಪಾಂಡೆ, ನಾಸಿರುದ್ದೀನ್ ಷಾ ಕೂಡ ಈ ಚಿತ್ರದಲ್ಲಿ ಅಭಿನಯಿಸಿದ್ದಾರೆ.

ಇಂಥದೊಂದು ಒಳ್ಳೆಯ ಅನುಭವ ಕೊಟ್ಟ ಸಿನಿಮಾದ ಕೆಲಸ ಪೂರೈಸಿದ ಮೇಲೆ ಸಿದ್ಧಾಂತ್ ತಮ್ಮ ಬಹುಕಾಲದ ಇಷ್ಟದ ಬೈಕ್ ಕೊಂಡುಕೊಂಡಿದ್ದು. 'ಕಿಕ್ ಹೊಡೆದೂ ಹೊಡೆದೂ ನನ್ನ ಅದೆಷ್ಟು ಚಪ್ಪಲಿಗಳು ಕಿತ್ತುಹೋಗಿದ್ದವೋ... ಈ ಬೈಕಿನ ಮೇಲೆ ಕೂತು ಜಾಕೆಟ್ ಮೇಲಿನ ಗುಂಡಿಯನ್ನು ಬೆರಳಲ್ಲಿ ಹಿಡಿದು ಬಿಂದಾಸ್ ಆಗಿದ್ದೇನೆ' ಎಂಬ ಅರ್ಥದ ಚಿತ್ರಶೀರ್ಷಿಕೆಯನ್ನು ಅವರು ತಮ್ಮಿಷ್ಟದ ಬೈಕ್ ಜತೆಗಿನ ಫೋಟೊಗಳಿಗೆ ಹಾಕಿ, ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡಿದ್ದಾರೆ. ■

